ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ:11-9-2013 ರ ಮಧ್ಯಾಹ್ನ 3:30 ಗಂಟೆಗೆ ವಿಧಾನ ಸೌಧದ ಸಮಿತಿ ಕೊಠಡಿ ಸಂಖ್ಯೆ:313 ರಲ್ಲಿ ನಡೆದ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದ ರಾಜ್ಯ ಮಟ್ಟದ ಚಾಲನಾ ಮತ್ತು ಪರಾಮರ್ಶ ಸಮಿತಿಯ ಸಭೆಯ ನಡಾವಳಿಗಳು.

---

**ಹಾಜರಿದ್ದ ಅಧಿಕಾರಿಗಳು: ಸನ್ಮಾನ್ಯರಾದ ಶ್ರೀ/ಶ್ರೀಮತಿ**

1. ಮೊಹಮ್ಮದ್ ಮೊಹಸಿನ್ ಭಾ.ಆ.ಸೇ., ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಬೆಂಗಳೂರು.
3. ಬೆಟ್ಟಸ್ವಾಮಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ.
4. ಎಸ್. ಜಯಕುಮಾರ್, ಜಂಟಿ ನಿರ್ದೇಶಕರು(ಮ.ಉ.ಯೋ.), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಎಸ್.ಬಡಿಗೇರ್, ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಕೆ.ಎಂ. ಗುರುರಾಜ್, ಉಪನಿರ್ದೇಶಕರು, ಜಂಟಿ ನಿರ್ದೇಶಕರ ಕಛೇರಿ(ಮ.ಉ.ಯೋ.), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಡಾ: ಸಿ.ಜಿ. ವೆಂಕಟೇಶ್ ಮೂರ್ತಿ, ಪ್ರೊಫೇಸರ್, ಆರ್.ಐ.ಇ., ಮೈಸೂರು.
8. ಬಸವರಾಜು ಗುರಿಕಾರ್, ಅಧ್ಯಕ್ಷರು, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
9. ಅಪ್ಪಾಜಿ ಗೌಡ, ಅಧ್ಯಕ್ಷರು, ಕನ್ನಡ ಕಸ್ತೂರಿ ಕಲಾ ಸಂಘ, ಬೆಂಗಳೂರು.

**ಇಲಾಖಾ ಪರವಾಗಿ ಹಾಜರಾದ ಪ್ರತಿನಿಧಿಗಳು: ಶ್ರೀ/ಶ್ರೀಮತಿ**

1. ಕೆ.ಆರ್. ಬಡಿಗೇರ, ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
2. ಆರ್.ಎಸ್.ಕಾಕಡೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಂಡಳಿ, ಬೆಂಗಳೂರು .
3. ಬಿ. ರಮೇಶ್‌ಬಾಬು, ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
4. ಐ.ಎಫ್. ಮಾಗಿ, ಅಧೀನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬೆಂಗಳೂರು.
5. ಎನ್.ಎಸ್. ಚಂದ್ರಶೇಖರ್, ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
6. ಎನ್. ಚಿಕ್ಕನರಸಯ್ಯ, ಶಿಕ್ಷಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
7. ಬಿ. ಸುಬ್ರಹ್ಮಣ್ಯ, ಅಕ್ಷಯ ಪಾತ್ರಾ ಫೌಂಡೇಶನ್, ರಾಜಾಜಿನಗರ, ಬೆಂಗಳೂರು.
8. ವೇದವ್ಯಾಸಭಟ್, ಅದಮ್ಯ ಚೇತನ ಸಂಸ್ಥೆ, ಬೆಂಗಳೂರು.
9. ಶ್ರೀಮತಿ ನೂರ್ ಫಾತಿಮಾ, ಅಸಿಸ್ಟೆಂಟ್ ಮ್ಯಾನೇಜರ್, ಇಂಡಿಯನ್ ಆಯಿಲ್ ಕಾರ್ಪೋರೇಶನ್, ಬೆಂಗಳೂರು.

**ಗೈರು ಹಾಜರಾದವರು: ಶ್ರೀ/ಶ್ರೀಮತಿ**

1. ಶ್ರೀ ನಳೀನ್ ಕುಮಾರ್ ಕಟೀಲ್, ಲೋಕ ಸಭಾ ಸದಸ್ಯರು, ದಕ್ಷಿಣ ಕನ್ನಡ ಕ್ಷೇತ್ರ,
2. ಶ್ರೀ ಎಸ್.ಆರ್. ವಿಶ್ವನಾಥ್, ಶಾಸಕರು, ಯಲಹಂಕ ಕ್ಷೇತ್ರ, ಬೆಂಗಳೂರು.
3. ಜಂಟಿ ಕಾರ್ಯದರ್ಶಿಗಳು, ಇಇ-1, ಎಂ.ಹೆಚ್.ಆರ್.ಡಿ. ನವದೆಹಲಿ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
5. ಹಿರಿಯ ಪ್ರಾದೇಶಿಕ ವ್ಯವಸ್ಥಾಪಕರು, ಭಾರತೀಯ ಆಹಾರ ನಿಗಮ.
6. ನಿರ್ದೇಶಕರು, ಕೇಂದ್ರೀಯ ಆಹಾರ ಸಂಶೋಧನಾ ಕೇಂದ್ರ, ಮೈಸೂರು.
7. ಸಹಾಯಕ ತಾಂತ್ರಿಕ ಸಲಹೆಗಾರರು, ಆಹಾರ ಮತ್ತು ಪೌಷ್ಠಿಕ ನಿಗಮ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
8. ಡಾ: ವೇದಾಜಕಾರಿಯ, ಸಂಜೀವಿನಿ ಟ್ರಸ್ಟ್, ರಿಚ್‌ಮಂಡ್ ಟೌನ್, ಬೆಂಗಳೂರು.
9. ಪ್ರೋ॥ ರಮಾ ಕೆ. ನಾಯಕ್, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ.
10. ಪ್ರೋಫೆಸರ್ ಅಂಡ್ ಹೆಡ್, ಐಸಕ್, ಬೆಂಗಳೂರು.
11. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ ಜಿಲ್ಲೆ.
12. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಯಚೂರು ಜಿಲ್ಲೆ.

* * *

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಮಧ್ಯಾಹ್ನ ಉಪಹಾರ ಯೋಜನೆಯ ಧ್ಯೇಯೋದ್ದೇಶಗಳನ್ನು ಪ್ರಾತ್ಯಕ್ಷಿಕೆ ಮುಖಾಂತರ ವಿವರಿಸಿದರು.

ಪ್ರಾತ್ಯಕ್ಷಿಕೆ ವೀಕ್ಷಿಸಿದ ಸಭಾಧ್ಯಕ್ಷರು, ದಾಖಲಾತಿಗಿಂತ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗಿರುವ ಬಗ್ಗೆ ಗಮನಿಸಿ ಕಾರಣವನ್ನು ಕೇಳಿದರು. ಆಯುಕ್ತರು, ಸಾ.ಶಿ.ಇಲಾಖೆ ರವರು, ನಗರ ಪ್ರದೇಶಗಳಲ್ಲಿ ಮಕ್ಕಳು ಊಟ ಮಾಡುತ್ತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಪ್ರಾದೇಶಿಕ ಆಹಾರ ದೊರೆಯದೆ (ಉದಾ: ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ರೊಟ್ಟಿ/ಚಪಾತಿ, ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಅನ್ನ ಮತ್ತು ಚಪಾತಿ, ಹಳೆ ಮೈಸೂರು ಪ್ರದೇಶಗಳಲ್ಲಿ ರಾಗಿ ಸ್ಥಳೀಯ ಆಹಾರವಾಗಿರುತ್ತದೆ) ಒಂದೇ ತೆರನಾದ ಊಟ ಮಾಡಲು ಇಷ್ಟಪಡದೆ ಇರುವುದರಿಂದ ಫಲಾನುಭವಿಗಳ ಸಂಖ್ಯೆಯಲ್ಲಿ ಕಡಿಮೆಯಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಭಾಧ್ಯಕ್ಷರು, ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಮಕ್ಕಳ ಮನವೊಲಿಸಿ ಎಲ್ಲಾ ಮಕ್ಕಳು ಫಲಾನುಭವಿಗಳಾಗುವಂತೆ ಕ್ರಮಕೈಗೊಳ್ಳಲು ತಿಳಿಸುತ್ತಾ, **ಸ್ಥಳೀಯ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ಪ್ರಾದೇಶಿಕವಾಗಿ ದೊರೆಯುವ ಆಹಾರಧಾನ್ಯಗಳಾದ ರಾಗಿ, ಗೋಧಿ, ಜೋಳ, ಬಳಸಿಕೊಂಡು ಮಕ್ಕಳು ಇಷ್ಟಪಡುವ ತರಕಾರಿಗಳನ್ನು ಬಳಸಿಕೊಂಡು ಬಿಸಿಯೂಟ ತಯಾರಿಸುವ ಬಗ್ಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಬದಲಾಯಿಸಲು ಪತ್ರ ಬರೆಯಲು ತಿಳಿಸಿದರು.**

1. **ಕ್ಷೀರಭಾಗ್ಯ ಯೋಜನೆಯ ಪ್ರಗತಿ ಬಗ್ಗೆ ಚರ್ಚೆ :**

ಕ್ಷೀರಭಾಗ್ಯ ಯೋಜನೆಯ ಪ್ರಗತಿ ಬಗ್ಗೆ ವೀಕ್ಷಿಸಿದ ಸಭಾಧ್ಯಕ್ಷರು, ಪ್ರತಿದಿನ ಬಳಸುವ ಹಾಲಿನ ಪುಡಿಯ ಬಳಕೆ ಹಾಗೂ ಸರಬರಾಜಿನ ಬಗ್ಗೆ ಕೆ.ಎಂ.ಎಫ್. ಅಧಿಕಾರಿಗಳನ್ನು ವಿಚಾರಿಸಲಾಗಿ, ಕೆ.ಎಂ.ಎಫ್. ಅಧಿಕಾರಿಗಳು ಇಲ್ಲಿಯವರೆಗೂ ಸರಬರಾಜು ಮಾಡಿದ ಹಾಲಿನ ಪುಡಿಯ ಬಗ್ಗೆ ಸಭಾ ಗಮನಕ್ಕೆ ತಂದರು. ಸಭಾಧ್ಯಕ್ಷರು ಹಾಲು ತಯಾರಿಸುವಲ್ಲಿ ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕು. ಗುಣಮಟ್ಟ ಪರಿಶೀಲಿಸಲು ಜವಾಬ್ದಾರಿಯನ್ನು ನಿಗದಿಗೊಳಿಸಬೇಕು. ಶುಚಿತ್ವವಾಗಿ ಹಾಲು ತಯಾರಿಸಿ ನೀಡಲು ತಿಳಿಸಿದರು. ಹಾಲಿನ ಪುಡಿಯಿಂದ ಹಾಲನ್ನು ತಯಾರಿಸುವ ವಿಧಾನದ ಬಗ್ಗೆ ಮಾರ್ಗಸೂಚಿಯನ್ನು ನೀಡಲಾಗಿದೆ ಎಂದು ಕೆ.ಎಂ.ಎಫ್. ಅಧಿಕಾರಿಗಳು ಸಭಾಧ್ಯಕ್ಷರ ಗಮನಕ್ಕೆ ತಂದರು. ಹಾಲಿನ ಪ್ಯಾಕೇಟ್‌ನ್ನು ವಾರಕ್ಕೊಮ್ಮೆ ಕೆ.ಎಂ.ಎಫ್.ನವರು ಸರಬರಾಜು ಮಾಡಿದ್ದಲ್ಲಿ, ಹಾಲಿನ ಪುಡಿ ತಾಜಾತನದಿಂದ ಕೂಡಿರುತ್ತದೆ ಮತ್ತು ಹಾಳಾಗುವ ಸಂಭವ ಕಡಿಮೆ ಎಂದು ಹಾಗೂ ಕ್ಷೀರಭಾಗ್ಯ ಯೋಜನೆಗೆ ಒಂದು ಪ್ರತ್ಯೇಕವಾದ ಪಾಲಿಥಿನ್ ಬ್ಯಾಗ್‌ನಲ್ಲಿ ಎಂ.ಡಿ.ಎಂ. ಚಿಹ್ನೆಯೊಂದಿಗೆ ಹಾಲಿನ ಪುಡಿಯನ್ನು ವಿತರಿಸಿದಲ್ಲಿ ದುರುಪಯೋಗ ಆಗುವುದನ್ನು ತಡೆಗಟ್ಟಬಹುದೆಂದು ಸಭಾಧ್ಯಕ್ಷರು ಕೆ.ಎಂ.ಎಫ್.ಗೆ ಸೂಚಿಸಿದರು. ಕೆ.ಎಂ.ಎಫ್ ಸಂಸ್ಥೆಯು ಮುಂದಿನ ದಿನಗಳಲ್ಲಿ ಹಾಲನ್ನು ಫ್ಲೆಕ್ಸಿ ಪ್ಯಾಕ್ ಮೂಲಕ ನೀಡುವ ಬಗ್ಗೆ ಅಭಿಪ್ರಾಯವನ್ನು ಕೋರಿದ್ದು, ಈ ಬಗ್ಗೆ ನಿರ್ಣಯಿಸಬೇಕಾಗಿದೆ ಎಂದು ತಿಳಿಸಿದರು.

ಕೆ.ಎಂ.ಎಫ್. ಅಧಿಕಾರಿಗಳು, ಹಾಲನ್ನು ಹಾಲಿನ ಪುಡಿಯನ್ನಾಗಿ ಪರಿವರ್ತಿಸಲು ವೆಚ್ಚ ಜಾಸ್ತಿಯಾಗುತ್ತದೆ ಎಂದು ತಿಳಿಸಿ, ನೇರವಾಗಿ ಹಾಲನ್ನು ಸರಬರಾಜು ಮಾಡಬಹುದೆಂದು ತಿಳಿಸಿದರು. **ಸಭಾಧ್ಯಕ್ಷರು ನೇರವಾಗಿ ಹಾಲು ಸರಬರಾಜು ಮಾಡುವುದು ಬೇಡವೆಂದು, ಫ್ಲೆಕ್ಸಿ ಪ್ಯಾಕ್‌ನಿಂದ ಬಹಳ ದುಬಾರಿ ಮತ್ತು ಪರಿಸರ ಮಾಲಿನ್ಯವಾಗುತ್ತದೆ. ಈಗಿರುವಂತೆ ಹಾಲಿನ ಪುಡಿಯನ್ನೇ ಒಂದು ಕೆ.ಜಿ.ಪ್ಯಾಕ್‌ಗಳಲ್ಲಿ ಸರಬರಾಜು ಮಾಡಲು ಸಭಾಧ್ಯಕ್ಷರು ಸೂಚಿಸಿದರು.**

(ಕ್ರಮ: ಕೆ.ಎಂ.ಎಫ್)

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು, ಮಕ್ಕಳು ಬೆಳಗ್ಗೆ ಶಾಲೆಗೆ ಬರುವಾಗಲೇ ತಿಂಡಿಯನ್ನು ತಿಂದು ಬರುವುದರಿಂದ ಬಂದೊಡನೆಯೇ ಹಾಲು ನೀಡಿದಲ್ಲಿ ಮಕ್ಕಳು ಪೂರ್ಣಪ್ರಮಾಣದಲ್ಲಿ ಹಾಲು ಕುಡಿಯದೇ ಇರಬಹುದು. ಬೆಳಗ್ಗೆ ನೀಡುವ ಬದಲು ಸಾಯಂಕಾಲ ಹಾಲು ನೀಡುವುದು ಒಳಿತೆಂದು ಸಭೆಯ ಗಮನಕ್ಕೆ ತಂದರು.

ಸಭಾಧ್ಯಕ್ಷರು, ಹಾಲು ನೀಡುವ ಸಮಯದ ಬಗ್ಗೆ ಸ್ಥಳೀಯವಾಗಿ ಸಮಯ ಹೊಂದಾಣಿಕೆ ಮಾಡಿಕೊಂಡು ಕಾರ್ಯಕ್ರಮ ನಡೆಸುವುದು. ಒಟ್ಟಾರೆ ಯಾವುದೇ ಕಾರಣಕ್ಕೂ ಕಾರ್ಯಕ್ರಮದ ಅನುಷ್ಠಾನದಲ್ಲಿ ವ್ಯತ್ಯಯವಾಗದಂತೆ ಜವಾಬ್ದಾರಿಯುತವಾಗಿ ಅನುಷ್ಠಾನಗೊಳಿಸಲು ಸೂಚಿಸಿದರು.

ಮಹಾನಗರ ಪಾಲಿಕೆಯ ಆಯುಕ್ತರಿಂದ, ಮಹಾನಗರ ಪಾಲಿಕೆ ನಡೆಸುತ್ತಿರುವ ಶಾಲೆಗಳಲ್ಲಿನ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯನ್ನು ಜಾರಿಗೊಳಿಸಲು ಬೇಡಿಕೆ ಇರುವುದಾಗಿ, ತಿಳಿಸಿದ ಆಯುಕ್ತರಿಗೆ, ಅಗತ್ಯ ಕ್ರಮ **ಕೈಗೊಳ್ಳುವಂತೆ ಸಭಾಧ್ಯಕ್ಷರು ಸೂಚಿಸಿದರು.**

(ಕ್ರಮ:ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರು (ಮ.ಉ.ಯೋ.))

2. **ಕ್ಷೀರಭಾಗ್ಯ ಯೋಜನೆಯ ಸಾಗಾಣಿಕಾ ವೆಚ್ಚ ಹೆಚ್ಚಿಸುವ ಬಗ್ಗೆ ಚರ್ಚೆ.**

ಹಾಲನ್ನು ಸರಬರಾಜು ಮಾಡಲು ನಿಗದಿಪಡಿಸಿರುವ ಪರಿವರ್ತನಾ ವೆಚ್ಚವು ಸಾಕಾಗುವುದಿಲ್ಲವೆಂದು ಹೆಚ್ಚುವರಿಯಾಗಿ ರೂ.0.41 ಗಳನ್ನು ನೀಡಲು ಸ್ವಯಂಸೇವಾ ಸಂಸ್ಥೆಗಳು ಸಭೆಯ ಗಮನಕ್ಕೆ ತಂದರು.

ಈಗ ನಿಗದಿಪಡಿಸಿರುವ ಪರಿವರ್ತನಾ ವೆಚ್ಚ ಸಕ್ಕರೆ-ರೂ.0.32, ಇಂಧನ-ರೂ.0.15, ಇತರೆ-ರೂ.0.12 ಒಟ್ಟು ರೂ.0.59ಗಳಾಗಿದ್ದು, ಕೋರಿಕೆಯಂತೆ ರೂ.0.41ಗಳನ್ನು ಹೆಚ್ಚಿಸಿದಲ್ಲಿ ಪರಿವರ್ತನಾ ವೆಚ್ಚವಾಗಿ ರೂ.1.00 ಹೆಚ್ಚಿಸಬೇಕಾಗುತ್ತದೆಂದು ಜಂಟಿ ನಿರ್ದೇಶಕರು (ಮ.ಉ.ಯೋ.)ರವರು ತಿಳಿಸಿದರು.

ಅದಮ್ಯ ಚೇತನ ಸಂಸ್ಥೆಯವರು, ಸ್ವಯಂಸೇವಾ ಸಂಸ್ಥೆಗಳು ಈ ಯೋಜನೆಯಿಂದ ತೊಂದರೆಯಾಗಿದೆ ಎಂದು ಪರಿವರ್ತನಾ ವೆಚ್ಚವನ್ನು ಹೆಚ್ಚಿಸುವಂತೆ ಕೋರಿದರು.

ಸಾರ್ವಜನಿಕರ ಸೇವೆಗಾಗಿಯೇ ಸ್ವಯಂ ಸೇವಾ ಸಂಸ್ಥೆಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಅವರದ್ದೇ ಆದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಈ ಸೇವೆಯು ಲಾಭದಾಯಕ ಸೇವೆಯಲ್ಲ. ಕೇಳಿದ್ದೆಲ್ಲವನ್ನು ಕೊಡುವುದಾದಲ್ಲಿ ಶಾಲಾ ಅಡುಗೆ ಕೇಂದ್ರಗಳಲ್ಲಿ ಏಕೆ ಕಾರ್ಯಕ್ರಮವನ್ನು ನಡೆಸಬಾರದು ಎಂದು ಸಭಾಧ್ಯಕ್ಷರು ಪ್ರಶ್ನಿಸಿದರು. ನೀವು ಈ ಕಾರ್ಯಕ್ರಮದಲ್ಲಿ ಒಂದು ಭಾಗವಾಗಿ ಕರ್ತವ್ಯ ನಿರ್ವಹಿಸುತ್ತಿದ್ದೀರಿ. ಮುಂದಿನ ಪೀಳಿಗೆಗಾಗಿ ಕರ್ತವ್ಯ ನಿರ್ವಹಿಸಿ. ಒಮ್ಮೆಲೆ ರೂ.1.00ಕ್ಕೆ ನಿಗದಿಪಡಿಸಲು ಸಾಧ್ಯವಿಲ್ಲ, **ರೂ.0.75ಕ್ಕೆ ಒಪ್ಪಬಹುದಾಗಿದೆಯೆಂದು ತಿಳಿಸಿ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಣಯಿಸಲಾಯಿತು.**

**(ಕ್ರಮ:ಆಯುಕ್ತರು, ಸಾ.ಶಿ.ಇ.)**

**3. ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರಬರಾಜಾಗುವ ಆಹಾರಧಾನ್ಯಗಳ ಸಾಗಾಣಿಕಾ ವೆಚ್ಚ ಹೆಚ್ಚಿಸುವ ಬಗ್ಗೆ ಚರ್ಚೆ.**

2004ನೇ ಇಸವಿಯಿಂದ ಸಾಗಾಣಿಕಾ ವೆಚ್ಚವನ್ನು ಪರಿಷ್ಕರಿಸಿರುವುದಿಲ್ಲ. ಕರ್ನಾಟಕ ಸರ್ಕಾರದಿಂದ ಭಾರತ ಸರ್ಕಾರಕ್ಕೆ ಈ ಬಗ್ಗೆ ಪತ್ರ ಬರೆಯಲಾಗಿದೆ ಮತ್ತು ಇದೇ ವಿಷಯವನ್ನು ಪಿ.ಎ.ಬಿ.2012-13ರ ಸಭೆಯಲ್ಲಿ ಚರ್ಚಿಸಲಾಗಿದ್ದು, ಅವರು ಸದರಿ ವಿಷಯವನ್ನು ಅಪರ ಕಾರ್ಯದರ್ಶಿಗಳವರ ಅಧ್ಯಕ್ಷತೆಯಲ್ಲಿ ನಡೆಯುವ ಎಸ್.ಎಂ.ಸಿ. ಸಭೆಯಲ್ಲಿ ಪರಿಹಾರ ಕಂಡುಕೊಳ್ಳಲು ಸೂಚಿಸಿರುತ್ತಾರೆ. ಸಾಗಾಣಿಕಾ ವೆಚ್ಚವನ್ನು ಸಮತಟ್ಟು ಪ್ರದೇಶಗಳಿಗೆ ರೂ.102/- ಮತ್ತು ಗುಡ್ಡಗಾಡು ಪ್ರದೇಶಗಳಿಗೆ ರೂ.122/- ರಂತೆ ಹೆಚ್ಚಿಸಬಹುದೆಂದು ಜಂಟಿ ನಿರ್ದೇಶಕರು ಸಭೆಯ ಗಮನಕ್ಕೆ ತಂದಾಗ, ಶಿಕ್ಷಣ ಕಾರ್ಯದರ್ಶಿಗಳು ಯಾವ ಆಧಾರದ ಮೇಲೆ ಒಮ್ಮೆಲೆ ಹೆಚ್ಚುವರಿ ಮಾಡಲು ಕೋರಲಾಗಿದೆ ಎಂದು ಪ್ರಶ್ನಿಸಿದಾಗ ಸಾಗಾಣಿಕಾ ವೆಚ್ಚದ ಬಗ್ಗೆ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಪಡೆದು ಸರಾಸರಿ ಲೆಕ್ಕಹಾಕಲಾಗಿದೆ. 2004 ರಿಂದಲೂ ಪರಿಷ್ಕರಣೆ ಆಗದಿರುವುದರಿಂದ ಪ್ರಸ್ತಾವನೆಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುವುದಾಗಿ ಜಂಟಿ ನಿರ್ದೇಶಕರು (ಮ.ಉ.ಯೋ) ಸಭೆಯ ಗಮನಕ್ಕೆ ತಂದರು.

**ಸಭಾಧ್ಯಕ್ಷರು, ಕೇಂದ್ರ ಸರ್ಕಾರದ ತೀರ್ಮಾನದಂತೆ ಕ್ರಮ ವಹಿಸಲು ಸೂಚಿಸಿದರು.**

**(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ)**

ಎಲ್ಲಾ ಎನ್.ಜಿ.ಒ.ಗಳ ಪರವಾಗಿ ಅದಮ್ಯ ಚೇತನ ಪ್ರತಿನಿಧಿಯವರು ಮಾತನಾಡುತ್ತಾ, ಎನ್.ಜಿ.ಒ.ಗಳಿಗೆ ನೀಡುತ್ತಿರುವ ಸಾಗಾಣಿಕಾ ವೆಚ್ಚ ರೂ.63-00 ಸಾಕಾಗುವುದಿಲ್ಲ, ನೇರವಾಗಿ ಎಫ್.ಸಿ.ಐ. ಗೋದಾಮಿನಿಂದ ಎನ್.ಜಿ.ಒ. ಅಡುಗೆ ಕೇಂದ್ರಕ್ಕೆ ಎನ್.ಜಿ.ಒ.ಗಳೇ ಎತ್ತುವಳಿ ಮಾಡಿಕೊಳ್ಳುತ್ತಿದ್ದು, ಇದರಲ್ಲಿ ಕೆ.ಎಫ್.ಸಿ.ಎಸ್.ಸಿ.ಯವರ ಪಾತ್ರವಿಲ್ಲದಿರುವುದರಿಂದ ಕೇಂದ್ರ ಸರ್ಕಾರ ಬಿಡುಗಡೆ ಮಾಡುವ ರೂ.75/-ನ್ನು ಎನ್.ಜಿ.ಒ.ಗಳಿಗೆ ಬಿಡುಗಡೆ ಮಾಡಬೇಕೆಂದು ಕೋರಿದರು.

**ಕೆ.ಎಫ್.ಸಿ.ಎಸ್.ಸಿ.ಯ ಪಾತ್ರವಿಲ್ಲದಿದ್ದಲ್ಲಿ ಸಾಗಾಣಿಕಾ ವೆಚ್ಚಕ್ಕಾಗಿ ನಿಗದಿಪಡಿಸಿದ ಮೊತ್ತವನ್ನು ನೀಡಬಹುದೆಂದು ನಿರ್ಣಯಿಸಲಾಯಿತು.**

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರು, ಮ.ಉ.ಯೋ.)**

**4. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಸೇವಾ ವೆಚ್ಚ ಹೆಚ್ಚಿಸುವ ಬಗ್ಗೆ ಚರ್ಚೆ.**

ಮಧ್ಯಾಹ್ನ ಉಪಹಾರ ಯೋಜನೆಗೆ ಅಗತ್ಯ ಆಹಾರ ಸಾಮಾಗ್ರಿಗಳ ಸರಬರಾಜು ಮಾಡಲು ಕೆ.ಎಫ್.ಸಿ.ಎಸ್.ಸಿ ಯನ್ನು ನೋಡಲ್ ಸಂಸ್ಥೆಯನ್ನಾಗಿ ನೇಮಕ ಮಾಡಲಾಗಿದ್ದು, ಸಂಸ್ಥೆಯು 2002-03ನೇ ಸಾಲಿನಿಂದಲೂ ಕಾರ್ಯಕ್ರಮಕ್ಕೆ ಅಕ್ಕಿ, ಬೇಳೆ, ಎಣ್ಣೆ ಮತ್ತು ಉಪ್ಪನ್ನು ಸರಬರಾಜು ಮಾಡುತ್ತಿದೆ. 2004ನೇ ಸಾಲಿನಲ್ಲಿ ಪ್ರತಿ ಕ್ವಿಂಟಾಲ್‌ಗೆ ಸೇವಾ ವೆಚ್ಚವಾಗಿ ರೂ., 10/-ನ್ನು ನಿಗದಿಪಡಿಸಿದ್ದು, ಈ ದರವನ್ನು ಕೆ.ಎಫ್.ಸಿ.ಎಸ್.ಸಿಯು ಪ್ರಸ್ತುತ ರೂ.35/- ಕ್ಕೆ ನಿಗದಿಪಡಿಸುವಂತೆ ಕೋರಿರುವ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆಯೆಂದು ಜಂಟಿ ನಿರ್ದೇಶಕರು (ಮ.ಉ.ಯೋ.) ಸಭೆಯ ಗಮನಕ್ಕೆ ತಂದರು.

ರೂ.10/- ರಿಂದ ಒಮ್ಮೆಲೆ ರೂ.35/-ಕ್ಕೆ ಹೆಚ್ಚಿಸುವ ಕಾರಣವೇನೆಂದು ಕೆ.ಎಫ್.ಸಿ.ಎಸ್.ಸಿ. ಅಧಿಕಾರಿಗಳನ್ನು ಸಭಾಧ್ಯಕ್ಷರು ಕೇಳಿದರು. ಸಭೆಯಲ್ಲಿ ಹಾಜರಿದ್ದ ಹಿರಿಯ ಉಪ ಪ್ರಧಾನ ವ್ಯವಸ್ಥಾಪಕರು ಈ ದರವನ್ನು ಕೆ.ಎಫ್.ಸಿ.ಎಸ್.ಸಿಯು ಗೋದಾಮು ಬಾಡಿಗೆ, ಸಿಬ್ಬಂದಿ ವೇತನ, ಸಾಧಿಲ್ವಾರು ವೆಚ್ಚ, ಟೆಂಡರ್, ಜಾಹೀರಾತು ಮತ್ತು ಇತರೆ ವೆಚ್ಚಗಳಿಗೆ ಭರಿಸುತ್ತಿದ್ದು, 2004 ಕ್ಕೆ ಹೋಲಿಕೆ ಮಾಡಿದಲ್ಲಿ ಈ ಎಲ್ಲಾ ದರಗಳು ಮೂರಕ್ಕಿಂತ ಅಧಿಕ ಪಟ್ಟು ಹೆಚ್ಚಾಗಿರುವುದಾಗಿ ತಿಳಿಸಿದರು.

ಸಭಾಧ್ಯಕ್ಷರು, **ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ತಕ್ಷಣ ರೂ.35/- ನೀಡುವ ಕುರಿತು ಪರಿಶೀಲನೆ ಮಾಡಿ ವರದಿ ನೀಡಲು ಕ್ರಮಕೈಗೊಳ್ಳುವಂತೆ ಶಿಕ್ಷಣ ಇಲಾಖಾ ಕಾರ್ಯದರ್ಶಿಗಳಿಗೆ ತಿಳಿಸಿದರು.**

**(ಕ್ರಮ: ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ)**

**5. ಕಿರುಧಾನ್ಯ ಬಳಕೆ (ರಾಗಿ, ಜೋಳ, ನವಣೆ ಮತ್ತು ಸಜ್ಜೆ) :**

ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದಡಿ ಕಿರು ಧಾನ್ಯಗಳನ್ನು ಬಳಕೆ ಮಾಡಲು ಕೇಂದ್ರ ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆ. ಈಗಾಗಲೇ 2012-13ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯಲ್ಲಿ ವಾರಕ್ಕೆ ಒಂದು ದಿನ ರಾಗಿ ಬಳಕೆ ಮಾಡಿ, ಮುದ್ದೆ ಮಾಡಿ ಮಕ್ಕಳಿಗೆ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ. ಮಕ್ಕಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿರುತ್ತದೆ.

ಆದರೆ ರಾಗಿ ದರವು ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ರೂ., 28/- ರಿಂದ 30/- ಗಳಿದ್ದು ಇದು ಅಕ್ಕಿ ದರ ರೂ.5:30 ಕ್ಕಿಂತ ಅಧಿಕವಾಗಿರುತ್ತದೆ. ಪ್ರತಿ ಕೆ.ಜಿಗೆ ವ್ಯತ್ಯಾಸ ರೂ., 22.30 ಗಳಷ್ಟು ಹೆಚ್ಚಾಗಿದ್ದು, ಇದರಿಂದ ಕೋಲಾರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಬಳಕೆ ಮಾಡಿರುವುದರಿಂದ 2012-13ನೇ ಸಾಲಿಗೆ 1 ರಿಂದ 10ನೇ ತರಗತಿಯ ವರಗೆ ಒಟ್ಟಾರೆ ರೂ.47.00 ಲಕ್ಷಗಳ ಮೊತ್ತವು ಹೆಚ್ಚುವರಿಯಾಗಿ ಭರಿಸಲಾಗಿದೆ. ರಾಗಿಯನ್ನು ಬಳಸಲು ಭೌತಿಕವಾಗಿ ಅನುಮೋದನೆ ನೀಡಿರುತ್ತದೆ. ಆದರೆ ರಾಗಿ ಬದಲಾಗಿ ಗೋಧಿಯನ್ನು 3ನೇ ಮತ್ತು 4ನೇ ತ್ರೈಮಾಸಿಕ ದಲ್ಲಿ ಬಿಡುಗಡೆಗೊಳಿಸಿರುತ್ತದೆ ಎಂದು ಜಂಟಿ ನಿರ್ದೇಶಕರು (ಮ.ಉ.ಯೋ.) ಸಭೆಯ ಗಮನಕ್ಕೆ ತಂದರು.

ರಾಗಿ ಬೆಲೆ ಜಾಸ್ತಿಯಾಗಿದ್ದರೆ, ಸಾಧ್ಯವಾದರೆ ರಾಗಿಮುದ್ದೆ ನೀಡಿ, ಇಲ್ಲವಾದರೆ ಬೇಡ, ಪ್ರಾದೇಶಿಕವಾಗಿ ಉಪಯೋಗಿಸುವ ಆಹಾರಧಾನ್ಯಗಳಿಂದ ಉತ್ತಮವಾಗಿ ಆಹಾರ ತಯಾರಿಸಿ ನೀಡಲು ಸಭಾಧ್ಯಕ್ಷರು ಸೂಚಿಸಿದರು ಮತ್ತು ಪ್ರಸ್ತುತ **ಕೇಂದ್ರ ಸರ್ಕಾರದಿಂದ ಗೋದಿ ಬಿಡುಗಡೆಯಾಗಿರುವುರಿಂದ ರಾಜ್ಯದ 27 ಜಿಲ್ಲೆಗಳಲ್ಲಿ ಗೋದಿ ಬಳಕೆಗೆ ಸೂಕ್ತ ನಿರ್ದೇಶನ ನೀಡಿ, ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಸೂಚಿಸಿದರು.**

**(ಕ್ರಮ:ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರು (ಮ.ಉ.ಯೋ.)**

**6. ನಿಯಮಾವಳಿಗಳ ಪರಿಷ್ಕರಣೆ :**

- **ಅಡುಗೆ ತಯಾರಿಕ ವೆಚ್ಚವನ್ನು ಪ್ರೈಸ್ ಇಂಡೆಕ್ಸ್ ಮೇಲೆ ನಿಗದಿಪಡಿಸುವುದು.**

ಪ್ರತಿ ವರ್ಷವೂ ಅಡುಗೆ ತಯಾರಿಕಾ ವೆಚ್ಚವನ್ನು ಶೇಕಡಾ 7.5 ರಷ್ಟನ್ನು ಕೇಂದ್ರ ಸರ್ಕಾರವು ಹೆಚ್ಚಿಸುತ್ತಿದ್ದು, ಈ ದರವನ್ನು ಶೇಕಡಾ 10 ರಷ್ಟು ಹೆಚ್ಚಿಸಿದಲ್ಲಿ ಪ್ರಸ್ತುತ ಹೆಚ್ಚಿರುವ ತರಕಾರಿ, ಎಣ್ಣೆ ಮತ್ತು ಅನಿಲ ಸಿಲಿಂಡರ್‌ಗಳ ದರಗಳನ್ನು ನಿಭಾಯಿಸಬಹುದಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಸಹಮತಿಸುವ ಬಗ್ಗೆ ಸಭೆ ನಿರ್ಣಯಿಸಬೇಕಾಗಿದೆಯೆಂದು ಆಯುಕ್ತರು, ಸಾ.ಶಿ.ಇಲಾಖೆರವರು ಸಭೆಯ ಗಮನಕ್ಕೆ ತಂದರು.

ಈಗಿರುವ ಶೇಕಡವಾರು 7.5ರಷ್ಟು ಕ್ರಮಬದ್ಧವಾಗಿದ್ದು, ಹೆಚ್ಚಿಸುವ ಅವಶ್ಯಕತೆಯಿಲ್ಲವೆಂದು, **ಒಂದು ವೇಳೆ ಕೇಂದ್ರ ಸರ್ಕಾರ ಶೇಕಡವಾರು ಹೆಚ್ಚಿಸಿದಲ್ಲಿ ಅದರಂತೆ ರಾಜ್ಯ ಸರ್ಕಾರ ಒಪ್ಪುವುದಾಗಿ ಕೇಂದ್ರಕ್ಕೆ ತಿಳಿಸಬಹುದಾಗಿದೆ ಎಂದು ನಿರ್ಣಯಿಸಲಾಯಿತು.**

**(ಕ್ರಮ:ಜಂಟಿ ನಿರ್ದೇಶಕರು (ಮ.ಉ.ಯೋ.)**

- **ಅಡುಗೆಯವರ ಸಂಭಾವನೆ ಹೆಚ್ಚಿಸುವುದು :**

ಪ್ರಸ್ತುತ ಕೇಂದ್ರ ಸರ್ಕಾರವು ಪ್ರತಿ ಅಡುಗೆಯವರಿಗೆ ಮಾಹೆಯಾನ ರೂ.1,000/- ಗಳನ್ನು ನಿಗದಿಪಡಿಸಿದ್ದು, ಇದಕ್ಕೆ ರಾಜ್ಯ ಸರ್ಕಾರವು ಮುಖ್ಯ ಅಡುಗೆಯವರಿಗೆ ಪ್ರತಿ ಮಾಹೆಯಾನ ರೂ.100/-ಗಳನ್ನು ಹೆಚ್ಚುವರಿಯಾಗಿ ನೀಡುತ್ತಿದೆ. ಅಡುಗೆ ಸಿಬ್ಬಂದಿಗೆ ಕನಿಷ್ಠ ವೇತನ ನೀಡುವಂತೆ ಬೇಡಿಕೆ ಇಟ್ಟಿರುತ್ತಾರೆ ಎಂದು ಆಯುಕ್ತರು, ಸಾ.ಶಿ.ಇಲಾಖೆರವರು ಸಭೆಯ ಗಮನಕ್ಕೆ ತಂದರು.

**ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು** ಸಭಾಧ್ಯಕ್ಷರು **ತಿಳಿಸಿದರು ಹಾಗೂ ಒಂದು ವೇಳೆ ಕೇಂದ್ರ ಸರ್ಕಾರ ಹೆಚ್ಚಿಸಿದಲ್ಲಿ ರಾಜ್ಯ ಸರ್ಕಾರ ಅದಕ್ಕೆ ಸಮ್ಮತಿ ನೀಡುತ್ತದೆ ಎಂದು ತಿಳಿಸಿದರು.**

**(ಕ್ರಮ:ಜಂಟಿ ನಿರ್ದೇಶಕರು (ಮ.ಉ.ಯೋ.)**

○ **ಪಾತ್ರೆ ಪರಿಕರಗಳಿಗೆ ನಿಗದಿಪಡಿಸಿರುವ ದರ ಹೆಚ್ಚಿಸುವುದು :**

ಪ್ರಸ್ತುತ ಕೇಂದ್ರ ಸರ್ಕಾರವು ಪಾತ್ರೆ ಪರಿಕರಕ್ಕಾಗಿ ಒಂದು ಶಾಲೆ/ಅಡುಗೆ ಕೇಂದ್ರಕ್ಕೆ ರೂ.5,000/- ಗಳನ್ನು ನಿಗದಿಗೊಳಿಸಿ ಬಿಡುಗಡೆಗೊಳಿಸುತ್ತಿದ್ದು, ಈಗಾಗಲೇ ಪಾತ್ರೆಪರಿಕರಗಳಿಗಾಗಿ ಹಣ ಬಿಡುಗಡೆ ಮಾಡಿ 5 ವರ್ಷಗಳು ಕಳೆದಿರುವುದರಿಂದ ಪಾತ್ರೆಪರಿಕರಗಳು ಹಾಳಾಗಿದ್ದು, ಇದನ್ನು ಕನಿಷ್ಠ ರೂ.10,000/- ಗಳಿಗೆ ಹೆಚ್ಚಿಸುವುದು ಸೂಕ್ತ ಅಥವಾ 100 ಮಕ್ಕಳಿರುವ ಶಾಲೆಗೆ ರೂ.7,500/-, 200 ಮಕ್ಕಳಿರುವ ಶಾಲೆಗೆ ರೂ.10,000/-, 300 ಕ್ಕೂ ಅಧಿಕ ಮಕ್ಕಳಿರುವ ಶಾಲೆಗಳಿಗೆ ರೂ.12,500/- ಗಳನ್ನು ನಿಗದಿಪಡಿಸುವಂತೆ **ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸ ಬಹುದಾಗಿದೆ ಎಂದು ಜಂಟಿ ನಿರ್ದೇಶಕರು (ಮ.ಉ.ಯೋ.)ರವರು ಸಭೆಯ ಗಮನಕ್ಕೆ ತಂದರು.**

ಒಳ್ಳೆಯ ಗುಣಮಟ್ಟದ ಪಾತ್ರೆಗಳನ್ನು ಕೊಂಡುಕೊಂಡಲ್ಲಿ ಹಾಳಾಗುವುದಿಲ್ಲ. ಆದಾಗ್ಯೂ **ಪ್ರತಿ 05 ವರ್ಷಕೊಮ್ಮೆ ಹಣ ಬಿಡುಗಡೆ ಮಾಡುವ ಬದಲಾಗಿ ಪ್ರತಿ 07 ವರ್ಷಕೊಮ್ಮೆ ಹಣ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಬಹುದೆಂದು ಸಭೆ ನಿರ್ಣಯಿಸಿತು.**

(ಕ್ರಮ:ಜಂಟಿ ನಿರ್ದೇಶಕರು (ಮ.ಉ.ಯೋ.)

- **ಎಂ.ಎಂಇ. ದರ ಹೆಚ್ಚಿಸುವುದು.**

ಪ್ರಸ್ತುತ ಕೇಂದ್ರ ಸರ್ಕಾರವು ರಿಕರಿಂಗ್ ಮೊತ್ತಗಳಿಗೆ ಶೇಕಡಾ 1.8 ರಷ್ಟನ್ನು ಮ್ಯಾನೇಜ್‌ಮೆಂಟ್, ಮಾನಿಟರಿಂಗ್ ಮತ್ತು ಇವ್ಯಾಲುಯೇಷನ್‌ಗಾಗಿ ನಿಗದಿಪಡಿಸುತ್ತಿದ್ದು, ಸದರಿ ಮೊತ್ತದಲ್ಲಿ

(ರೂ., ಲಕ್ಷಗಳಲ್ಲಿ.)

| | | | |
|---|---|---|---|
| ○ | ಅಡುಗೆಯವರ ತರಬೇತಿಗಾಗಿ | ರೂ., | 135.07 |
| ○ | ಶಾಲೆಗಳಲ್ಲಿ ದಾಖಲೀಕರಣಕ್ಕಾಗಿ ವಹಿಗಳ ಮುದ್ರಣಕ್ಕಾಗಿ | ರೂ., | 76.31 |
| ○ | ಜಿಲ್ಲೆ ಮತ್ತು ತಾಲ್ಲೂಕು ಕಛೇರಿಗಳಿಗೆ ಪ್ರಿಂಟರ್/ಜೆರಾಕ್ಸ್ ಯಂತ್ರಗಳ ಖರೀದಿಗಾಗಿ | ರೂ., | 23.10 |
| ○ | ಜಿಲ್ಲಾ ಮಟ್ಟದ ಕಛೇರಿಗಳಿಗೆ ಬಾಡಿಗೆ ವಾಹನಕ್ಕಾಗಿ | ರೂ., | 97.75 |
| ○ | ಮೌಲ್ಯಮಾಪನಕ್ಕಾಗಿ | ರೂ., | 37.37 |
| ○ | ಸಭೆ ಮತ್ತು ಸಮಾರಂಭಗಳಿಗಾಗಿ | ರೂ., | 21.08 |
| ○ | ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಕಛೇರಿಗಳ ಸಾಧಿಲ್ವಾರುಗಳಿಗೆ | ರೂ., | 94.28 |
| ○ | ಶಾಲೆಗಳಲ್ಲಿನ ತೂಕದ ಯಂತ್ರಗಳ ಸತ್ಯಾಪನೆಗಾಗಿ | ರೂ., | 147.92 |
| ○ | ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಅಧಿಕಾರಿಗಳು ಮತ್ತು ಸಿಬ್ಬಂದಿ | | |
| ○ | ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳಿಗೆ | ರೂ., | 74.26 |
| ○ | ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಕಛೇರಿಗಳ ಹೊರಗುತ್ತಿಗೆ ನೌಕರರ ಸಂಬಾವನೆಗಾಗಿ | ರೂ., | 319.72 |
| ○ | ಎಂ.ಐ.ಎಸ್ ಡಾಟಾ ಎಂಟ್ರಿಗಾಗಿ | ರೂ., | 66.14 |
| ○ | **ಒಟ್ಟು** | **ರೂ.,** | **1093.00 ಲಕ್ಷಗಳು** |

ಹೆಚ್ಚುವರಿಯಾಗಿ ಆಹಾರ ಧಾನ್ಯ/ಸಾಮಾಗ್ರಿಗಳ ರಾಸಾಯನಿಕ ಪರೀಕ್ಷೆ ವೆಚ್ಚಗಳಿಗೆ , ಸಿದ್ದಪಡಿಸಿದ ಆಹಾರದ ಪೌಷ್ಟಿಕಾಂಶಗಳ ಪರೀಕ್ಷೆಗಳಿಗೆ, ಕ್ಲಸ್ಟರ್ ಮಟ್ಟದಲ್ಲಿ ಅಂಕಿ ಅಂಶಗಳ ಕ್ರೋಢೀಕರಣಕ್ಕಾಗಿ ಹೊರಗುತ್ತಿಗೆಯಡಿ ಸಿಬ್ಬಂದಿಗೆ ಸಂಭಾವನೆಗಾಗಿ, ಸೋಷಿಯಲ್ ಆಡಿಟ್‌ಗಾಗಿ, ತುರ್ತು ನಿಧಿ ಸ್ಥಾಪನೆಗಾಗಿ, ತಾಲ್ಲೂಕು ಕಛೇರಿಗಳಿಗೆ ಬಾಡಿಗೆ ವಾಹನ ಸೌಲಭ್ಯಕ್ಕಾಗಿ, ತರಬೇತಿ ಕೇಂದ್ರಗಳ ಸ್ಥಾಪನೆಗಾಗಿ, ಅಡಗೆ ಮಾಡಲು ಇತರೆ ಮೂಲಗಳ ಬಳಕೆಗಾಗಿ (ಸ್ಟೀಮ್ ಬಾಯ್ಲರ್, ಸೋಲಾರ್ ಕುಕ್ಕರ್, ಬಯೋಗ್ಯಾಸ್ ಪ್ಲಾಂಟ್ ಇತರೆ), ಫ್ಲೋರೈಡ್‌ಯುಕ್ತ ನೀರು ಇರುವ ಕಡೆ ನೀರಿನ ಫಿಲ್ಟರ್‌ಗಳನ್ನು ನೀಡಲು ಮತ್ತು ಇತರೆ ವೆಚ್ಚಗಳಿಗೆ ಅಗತ್ಯವಿದ್ದು **ಕೇಂದ್ರ ಸರ್ಕಾರಕ್ಕೆ ಪ್ರಸ್ತುತ ಇರುವ ಶೇಕಡಾ 1.8 ರಷ್ಟನ್ನು ಶೇಕಡಾ 4 ಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಬಹುದಾಗಿದೆ ಎಂದು ಆಯುಕ್ತರು, ಸಾ.ಶಿಇಲಾಖೆರವರು ಸಭೆಯ ಗಮನಕ್ಕೆ ತಂದರು.**

ಇರುವ ಶೇಕಡಾ 1.8 ರಷ್ಟನ್ನು ಅನುಮೋದಿಸುತ್ತಾ, ಹೆಚ್ಚುವರಿಯಾಗಿ ನಿಗದಿಪಡಿಸಬೇಕಾದ ಶೇಕಡವಾರುವಿನ ಬಗ್ಗೆ ಸ್ಟೀಮ್ ಬಾಯ್ಲರ್, ಸೋಲಾರ್ ಕುಕ್ಕರ್, ನೀರಿನ ಫಿಲ್ಟರ್‌ಗಳನ್ನು ಶಾಲೆಗಳಿಗೆ ಅಗತ್ಯವಿರುವ ಸೌಲಭ್ಯಗಳಿಗೆ ಸ್ಥಳೀಯ ದಾನಿಗಳಿಂದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಹಾಯದಿಂದ ದೇಣಿಗೆ ಸಂಗ್ರಹಿಸಿ ಬಳಸಿಕೊಳ್ಳಲು ಸಭಾಧ್ಯಕ್ಷರು ಸೂಚಿಸಿದರು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು **ಹಾಗೂ ಒಂದು ವೇಳೆ ಕೇಂದ್ರ ಸರ್ಕಾರ ಹೆಚ್ಚಿಸಿದಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕ್ರಮವಹಿಸಲು ಸೂಚಿಸಿದರು.**

(ಕ್ರಮ:ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರು (ಮ.ಉ.ಯೋ.)

7. **ಮಧ್ಯಾಹ್ನ ಉಪಹಾರ ಯೋಜನೆಗೆ ಹೊಸದಾಗಿ ಸೇರ್ಪಡೆಗೊಳಿಸುವ ಘಟಕಗಳು:**

ಕೇಂದ್ರ ಸರ್ಕಾರವು ಮಧ್ಯಾಹ್ನದ ಉಪಹಾರ ಯೋಜನೆಯಡಿ ಈ ಕೆಳಕಂಡ ಘಟಕಗಳನ್ನು ಸೇರ್ಪಡೆಗೊಳಿಸಲು ರಾಜ್ಯ ಸರ್ಕಾರದ ಸಹಮತಿಯನ್ನು ಕೋರಿರುತ್ತದೆ.

- **ಮಧ್ಯಾಹ್ನ ಉಪಹಾರ ಯೋಜನೆಯನ್ನು ಒಂದು ಜಿಲ್ಲೆಯಲ್ಲಿ ಶೇಕಡ 25 ಕ್ಕಿಂತ ಹೆಚ್ಚಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಥವಾ ಅಲ್ಪಸಂಖ್ಯಾತ ಕೋಮಿನ ಜನಸಂಖ್ಯೆ ಇದ್ದಲ್ಲಿ ಅಂತಹಾ ಜಿಲ್ಲೆಗಳ ಅನುದಾನ ರಹಿತ ಖಾಸಗಿ ಶಾಲೆಗಳಿಗೂ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ವಿಸ್ತರಿಸುವುದು.**

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಥವಾ ಅಲ್ಪಸಂಖ್ಯಾತ ಕೋಮಿನ ಶೇಕಡಾ 25 ಕ್ಕಿಂತ ಹೆಚ್ಚಿಗೆ ಜನಸಂಖ್ಯೆಯನ್ನು ಚಿತ್ರದುರ್ಗ, ದಾವಣಗೆರೆ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ, ಬೀದರ್, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಶೇಕಡ 25 ಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುತ್ತದೆ. ಈ 15 ಜಿಲ್ಲೆಗಳಲ್ಲಿ ಅನುದಾನರಹಿತ ಖಾಸಗಿ ಶಾಲೆಗಳಿಗೆ ಮಧ್ಯಾಹ್ನ ಉಪಹಾರ ಯೋಜನೆಯನ್ನು ವಿಸ್ತರಿಸಿದಲ್ಲಿ ಒಟ್ಟಾರೆ 5743 ಶಾಲೆಗಳ 1 ರಿಂದ 8ನೇ ತರಗತಿಯ 10.39 ಲಕ್ಷ ಮಕ್ಕಳಿಗೆ ರೂ., 49871.71 ಲಕ್ಷಗಳ ಅವಶ್ಯಕತೆ ಇರುತ್ತದೆ. ಇದರಲ್ಲಿ ರಾಜ್ಯದ ಪಾಲು ರೂ.,12007.59 ಲಕ್ಷಗಳು ಮತ್ತು ಕೇಂದ್ರದ ಪಾಲು ರೂ., 37864.12 ಲಕ್ಷಗಳಾಗಿರುತ್ತವೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಸಹಮತಿ ಸೂಚಿಸಬೇಕಾಗಿದೆ ಎಂದು ಆಯುಕ್ತರು, ಸಾ.ಶಿ.ಇಲಾಖೆ ರವರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಅಧ್ಯಕ್ಷರು, ಆರ್ಥಿಕ ಇಲಾಖೆರವರ ಅಭಿಪ್ರಾಯ ತಿಳಿಸಲು ತಿಳಿಸಿದರು, **ಕೇಂದ್ರ ಸರ್ಕಾರವು ನಿರ್ದೇಶನ ನೀಡಿದಲ್ಲಿ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸಹಮತಿ ಸೂಚಿಸಲು ತಿಳಿಸಿದರು.**

**(ಕ್ರಮ:ಆಯುಕ್ತರು, ಸಾ.ಶಿ.ಇಲಾಖೆ)**

- **ಅನುದಾನ ರಹಿತ ಶಾಲೆಗಳಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿಯಲ್ಲಿ ದಾಖಲಾಗಿರುವ ಶೇಕಡಾ 25 ರಷ್ಟು ಮಕ್ಕಳಿಗೆ ಮಧ್ಯಾಹ್ನ ಉಪಹಾರ ಯೋಜನೆಯನ್ನು ವಿಸ್ತರಿಸುವುದು.**

ಆರ್.ಟಿ.ಇ ನಡಿ ರಾಜ್ಯಾದ್ಯಂತ ಪ್ರಸಕ್ತ ಸಾಲಿನಲ್ಲಿ 16964 ಶಾಲೆಗಳಲ್ಲಿ 1,08,344 ಮಕ್ಕಳು ದಾಖಲಾತಿಗೆ ಅವಕಾಶವಿದ್ದು, ಸದರಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ವಿಸ್ತರಿಸಿದಲ್ಲಿ ರೂ., 3595.08 ಲಕ್ಷಗಳ ಅನುದಾನ ಅವಶ್ಯಕತೆ ಇರುತ್ತದೆ. ಇದರಲ್ಲಿ ರಾಜ್ಯದ ಪಾಲು ರೂ., 645.40 ಲಕ್ಷಗಳು ಮತ್ತು ಕೇಂದ್ರದ ಪಾಲು ರೂ., 2949.68 ಲಕ್ಷಗಳಾಗಿರುತ್ತವೆ ಎಂದು ಆಯುಕ್ತರು, ಸಾ.ಶಿ.ಇಲಾಖೆ ರವರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಸಭಾಧ್ಯಕ್ಷರು, ಪ್ರಸ್ತುತ ಈ ವಿಷಯವನ್ನು **ಸದ್ಯಕ್ಕೆ ಕೈಬಿಡುವಂತೆ ಸೂಚಿಸಿದರು. ಮುಂದಿನ ದಿನಗಳಲ್ಲಿ ಈ ಬಗ್ಗೆ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳೋಣವೆಂದು ತಿಳಿಸಿದರು.**

**(ಕ್ರಮ:ಆಯುಕ್ತರು, ಸಾ.ಶಿ.ಇಲಾಖೆ)**

- **ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಆವರಣದಲ್ಲಿರುವ ಪೂರ್ವ ಪ್ರಾಥಮಿಕ ಶಾಲೆಗಳಿಗೆ (ಅಂಗನವಾಡಿ) ಮಕ್ಕಳಿಗೆ ಮಧ್ಯಾಹ್ನ ಉಪಹಾರಯೋಜನೆಯನ್ನು ವಿಸ್ತರಿಸುವುದು.**

ರಾಜ್ಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಆವರಣದಲ್ಲಿ 8093 ಪೂರ್ವ ಪ್ರಾಥಮಿಕ (ಅಂಗನವಾಡಿ)ಶಾಲೆಗಳಿದ್ದು, ಸದರಿ ಶಾಲೆಗಳಲ್ಲಿ 2,40,276 ಮಕ್ಕಳು ದಾಖಲಾತಿ ಇರುತ್ತದೆ. ಸದರಿ ಮಕ್ಕಳಿಗೆ ಬಿಸಿಯೂಟವನ್ನು ವಿಸ್ತರಿಸಿದಲ್ಲಿ ಒಟ್ಟಾರೆ ರೂ.4415.68 ಲಕ್ಷಗಳ ಅವಶ್ಯಕತೆ ಇರುತ್ತದೆ. ಇದರಲ್ಲಿ ರಾಜ್ಯದ ಪಾಲು ರೂ.880.17 ಲಕ್ಷಗಳು ಮತ್ತು ಕೇಂದ್ರದ ಪಾಲು ರೂ., 3535.51 ಲಕ್ಷಗಳಾಗಿರುತ್ತವೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದ ಸಹಮತಿ ಸೂಚಿಸಬೇಕಾಗಿದೆ ಎಂದು ಆಯುಕ್ತರು, ಸಾ.ಶಿ.ಇಲಾಖೆ ರವರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಸಬಾಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೊಂದಿಗೆ ಚರ್ಚಿಸಿ ಆ ಇಲಾಖೆಯಿಂದ ಇರುವ ಸೌಲಭ್ಯಗಳ ಬಗ್ಗೆ ಪರಿಶೀಲಿಸಿ ಎರಡೂ ಇಲಾಖೆಗಳಿಂದಲೂ **ಅನುದಾನ ಎರಡು ಬಾರಿ ಬಳಕೆಯಾಗದಂತೆ ಕ್ರಮವಹಿಸಿ ಕೇಂದ್ರ ಸರ್ಕಾರವು ನೀಡುವ ನಿರ್ದೇಶನಕ್ಕೆ ಬದ್ಧರಾಗಲು ತಿಳಿಸಿದರು.**

**(ಕ್ರಮ:ಆಯುಕ್ತರು, ಸಾ.ಶಿ.ಇಲಾಖೆ)**

- **ಸೋಲಾರ್ ಕುಕ್ಕರ್ ಅಳವಡಿಸುವುದು ಅಥವಾ ಇತರೆ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು.**

ರಾಜ್ಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 20 ರಿಂದ 200 ಮಕ್ಕಳಿರುವ ಶಾಲೆಗಳಲ್ಲಿ ಮಧ್ಯಾಹ್ನ ಬಿಸಿಯೂಟ ಸಿದ್ಧಪಡಿಸಲು ಸೋಲಾರ್ ಕುಕ್ಕರ್ ಅಳವಡಿಸಲು ಅಥವಾ ಇತರೆ ಪದ್ಧತಿಗಳನ್ನು ಅಳವಡಿಸುವ ಬಗ್ಗೆ ರಾಜ್ಯ ಸರ್ಕಾರದ ಸಹಮತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ ಎಂದು ಆಯುಕ್ತರು, ಸಾ.ಶಿ.ಇಲಾಖೆ ರವರು ಸಭೆಯ ಗಮನಕ್ಕೆ ತಂದರು. **ರಾಜ್ಯ ಸರ್ಕಾರದ ಸಹಮತಿಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಲು ಸಭಾಧ್ಯಕ್ಷರು ತಿಳಿಸಿದರು.**

**(ಕ್ರಮ:ಆಯುಕ್ತರು, ಸಾ.ಶಿ.ಇಲಾಖೆ)**

8. **ಅನುದಾನ ಬಿಡುಗಡೆಯಾಗಿ ನಿರ್ಮಾಣವಾಗದೇ ಬಾಕಿ ಇರುವ ಅಡುಗೆಕೋಣೆಗಳ ನಿರ್ಮಾಣದ ಬಗ್ಗೆ :**

2007-08ನೇ ಸಾಲಿನಿಂದ 2009-10ನೇ ಸಾಲಿನ ವರೆಗೆ ಒಟ್ಟಾರೆ 24847 ಅಡುಗೆ ಕೋಣೆಗಳಿಗೆ ಕೇಂದ್ರ ಸರ್ಕಾರ ಘಟಕ ವೆಚ್ಚ ರೂ.60,000/- ದಂತೆ ನಿಗದಿಗೊಳಿಸಿ ಬಿಡುಗಡೆಗೊಳಿಸಿದ್ದು. ಸದರಿ ಅಡುಗೆ ಕೋಣೆಗಳಲ್ಲಿ 25788 ಅಡುಗೆ ಕೋಣೆಗಳನ್ನು ಈಗಾಗಲೇ ನಿರ್ಮಾಣಗೊಂಡಿರುತ್ತವೆ. ಹಾಗೂ 499 ಅಡುಗೆ ಕೋಣೆಗಳು ವಿವಿಧ ಹಂತದಲ್ಲಿ ಮತ್ತು 1566 ಅಡುಗೆ ಕೋಣೆಗಳು ಪ್ರಾರಂಭವಾಗಿರುವುದಿಲ್ಲ. ಬಿಡುಗಡೆಯಾಗಿರುವ ಅನುದಾನವು ಪ್ರಸ್ತುತ ಕಡಿಮೆ ಬೀಳುವುದರಿಂದ ಈ ಅಡುಗೆ ಕೋಣೆಗಳನ್ನು ನಿಗದಿಪಡಿಸಿರುವ ಅನುದಾನದಲ್ಲಿ ಕಟ್ಟಲು ಸಾಧ್ಯವಾಗುವುದಿಲ್ಲ ಹಾಗಾಗಿ ಸದರಿ ಅಡುಗೆ ಕೋಣೆಗಳಿಗೆ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿನ ಇತರೆ ಅನುದಾನಗಳ ಮ್ಯಾಚಿಂಗ್ ಗ್ರಾಂಟ್ ಬಳಸಿಕೊಂಡು ನಿರ್ಮಾಣ ಮಾಡಲು ಸೂಕ್ತ ಆದೇಶ/ನಿರ್ದೇಶನ ಹೊರಡಿಸಿದ್ದಲ್ಲಿ ಪೂರ್ಣಗೊಳಿಸಬಹುದಾಗಿದೆ ಎಂದು ಆಯುಕ್ತರು, ಸಾ.ಶಿ.ಇಲಾಖೆಯವರು ಸಭೆಯ ಗಮನಕ್ಕೆ ತಂದರು.

**ನರೇಗಾ ಸ್ಕೀಮ್‌ನ್ನು ಬಳಸಿಕೊಂಡು ಅಡುಗೆ ಕೋಣೆಗಳನ್ನು ಪೂರ್ಣಗೊಳಿಸಲು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಪತ್ರ ಬರೆಯಲು ಸಭಾಧ್ಯಕ್ಷರು ಸೂಚಿಸಿದರು.**

**(ಕ್ರಮ:ಆಯುಕ್ತರು, ಸಾ.ಶಿ.ಇಲಾಖೆ)**

9. **ಪೌಷ್ಠಿಕಾಂಶ ಮಾತ್ರೆಗಳ ಸರಬರಾಜು ಶುಗರ್ ಕೋಟೆಡ್‌ನಿಂದ ಎಂಟ್ರಿಕ್ ಕೋಟೆಡ್‌ಗೆ ಬದಲಾಯಿಸುವ ಬಗ್ಗೆ :**

2003-04ನೇ ಸಾಲಿನಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ 1 ರಿಂದ 7 ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಹೆಚ್ಚುವರಿ ಪೌಷ್ಠಿಕಾಂಶ ಮಾತ್ರೆಗಳಾದ ವಿಟಮಿನ್-ಎ, ಐರನ್ & ಫೋಲಿಕ್ ಆಸಿಡ್ ಮತ್ತು ಅಲ್ಬಂಡಜಾಲ್ ಮಾತ್ರೆಗಳನ್ನು ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಎನ್.ಆರ್.ಹೆಚ್.ಎಂ ನಡಿ 6 ರಿಂದ 10ನೇ ತರಗತಿಯ ಮಕ್ಕಳಿಗೆ ಐರನ್ & ಫೋಲಿಕ್ ಆಸಿಡ್ ಮತ್ತು ಅಲ್ಬಂಡಜಾಲ್ ಮಾತ್ರೆಗಳನ್ನು ನೀಡಲಾಗುತ್ತಿದೆ.

ಮಕ್ಕಳಿಗೆ ಶುಗರ್ ಕೋಟೆಡ್ ಐರನ್ & ಫೋಲಿಕ್ ಆಸಿಡ್ ಮಾತ್ರೆ ಸೇವನೆಯಿಂದ ಮಾತ್ರೆಗಳು ಕೂಡಲೇ ಹೊಟ್ಟೆಯಲ್ಲಿ ಕರಗುವುದರಿಂದ ಗ್ಯಾಸ್ಟ್ರೈಟಿಸ್ ಆಗಿ ಮಕ್ಕಳಲ್ಲಿ ಹೊಟ್ಟೆನೋವು ಕಾಣಿಸುವ ಸಂದರ್ಭಗಳಿರುವುದರಿಂದ, ಎನ್.ಆರ್.ಹೆಚ್.ಎಂ ನಡಿ ಎಂಟ್ರಿಕ್ ಕೋಟೆಡ್ ಐರನ್ & ಫೋಲಿಕ್ ಆಸಿಡ್ ಮಾತ್ರೆಗಳನ್ನು 6 ರಿಂದ 10ನೇ ತರಗತಿ ಮಕ್ಕಳಿಗೆ ವಿತರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯಡಿ 1 ರಿಂದ 5ನೇ ತರಗತಿ ಮಕ್ಕಳಿಗೆ ಐರನ್ & ಫೋಲಿಕ್ ಆಸಿಡ್ ಮಾತ್ರೆಗಳನ್ನು ಸಹ ಶುಗರ್ ಕೋಟೆಡ್ ಬದಲಾಗಿ ಎಂಟ್ರಿಕ್ ಕೋಟೆಡ್ ಮಾತ್ರೆಗಳನ್ನು ವಿತರಿಸುವುದಾಗಿ ಆರೋಗ್ಯ ಇಲಾಖೆಯ ಆಯುಕ್ತರು ಕೋರಿದ್ದು, ಈ ಬಗ್ಗೆ ಮಕ್ಕಳಿಗೆ ಯಾವುದು ಉತ್ತಮವೋ ಆ ಮಾತ್ರೆಯನ್ನು ನೀಡುವಂತೆ ಆರೋಗ್ಯ ಇಲಾಖೆಯ ಆಯುಕ್ತರಿಗೆ ತಿಳಿಸಲಾಗಿದೆ. ಶುಗರ್ ಕೋಟೆಡ್ ಮಾತ್ರೆಯ ದರಕ್ಕೂ ಎಂಟ್ರಿಕ್ ಕೋಟೆಡ್ ಮಾತ್ರೆಯ ದರಕ್ಕೂ ವ್ಯತ್ಯಾಸವಿದ್ದು, ಸುಮಾರು ರೂ.3.09 ಕೋಟಿಗಳಷ್ಟು ಹೆಚ್ಚುವರಿ ಅನುದಾನದ ಅವಶ್ಯಕತೆ ಇರುತ್ತದೆ ಎಂದು ಜಂಟಿ ನಿರ್ದೇಶಕರು (ಮ.ಉ.ಯೋ.)ರವರು ಸಭೆಯ ಗಮನಕ್ಕೆ ತಂದರು.

ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ **ಆರೋಗ್ಯ ಇಲಾಖೆಯ ನಿರ್ಣಯದಂತೆ ಎಂಟ್ರಿಕ್ ಕೋಟೆಡ್ ಮಾತ್ರೆಗಳನ್ನು ಸಹಮತಿಸಿ, ಮಧ್ಯಾಹ್ನ ಉಪಹಾರ ಯೋಜನೆಯಡಿ ಡಬಲ್ ಫೋರ್ಟಿಫೈಡ್ ಉಪ್ಪನ್ನೇ ಬಳಸಲು ಸೂಚಿಸಲಾಯಿತು.**

**(ಕ್ರಮ:ಜಂಟಿ ನಿರ್ದೇಶಕರು (ಮ.ಉ.ಯೋ.)**

10. **ತೊಗರಿಬೇಳೆ ಸರಬರಾಜಿನ ಬಗ್ಗೆ ಚರ್ಚೆ :**

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಮಧ್ಯಾಹ್ನ ಉಪಹಾರ ಯೋಜನೆಗೆ ಅಗತ್ಯ ವಿರುವ ಆಹಾರ ಸಾಮಾಗ್ರಿಗಳಾದ ಅಕ್ಕಿ, ತೊಗರಿ ಬೇಳೆ, ಆರ್.ಬಿ.ಡಿ ತಾಳೆ ಎಣ್ಣೆ ಮತ್ತು ಡಬಲ್ ಫೋರ್ಟಿಫೈಡ್ ಉಪ್ಪನ್ನು ಸರಬರಾಜು ಮಾಡುತ್ತಿದೆ. ಈ ನಿಗಮವು ಸರಬರಾಜು ಮಾಡುವ ಸಾಮಾಗ್ರಿಗಳನ್ನು ಮಕ್ಕಳು ಸೇವಿಸಲು ಯೋಗ್ಯವಾಗಿದೆಯೇ? ಅಥವಾ ಇಲ್ಲವೇ ಎಂಬುದರ ಬಗ್ಗೆ ಗುಣಮಟ್ಟ ಪರೀಕ್ಷೆಗೆ ಒಳಪಡಿಸಿ, ದೃಢೀಕರಿಸಿ ಸರಬರಾಜು ಮಾಡಲು ಕ್ರಮವಹಿಸುವಂತೆ ಕೆ.ಎಫ್.ಸಿ.ಎಸ್.ಸಿಗೆ ಪತ್ರ ಬರೆಯಲಾಗಿದೆ.

**ಅಕ್ಕಿ, ಬೇಳೆ, ಎಣ್ಣೆ ಮತ್ತು ಉಪ್ಪಿನ ಬಗ್ಗೆ ಪರೀಕ್ಷೆಯನ್ನು ರ್‍ಯಾಂಡಮ್ ಚೆಕ್ ಮಾಡಿ. ಕಳಪೆಯಾಗಿದ್ದರೆ ರಿಜೆಕ್ಟ್ ಮಾಡಿ. ಕಡಿಮೆ ತೂಕ ಇದ್ದರೆ ಲೀಗಲ್ ಆಕ್ಷನ್ ಮಾಡಿ. ಸೀರಿಯಸ್ ಕ್ರಮ ತೆಗೆದುಕೊಳ್ಳಿ ಎಂದು ಸಭಾಧ್ಯಕ್ಷರು ಸೂಚಿಸಿದರು.**

ನಿಗಮವು ಮಧ್ಯಾಹ್ನ ಉಪಹಾರ ಯೋಜನೆಯ ಆಹಾರ ಧಾನ್ಯಗಳನ್ನು ಪೂರೈಸುವಲ್ಲಿ ನೋಡಲ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸುತ್ತಿದೆ. ಆದರೆ ನಿಗಮಕ್ಕೆ ನೀಡಬೇಕಾದ ಹಣದ ಬಗ್ಗೆ ಜಿಲ್ಲಾ ಪಂಚಾಯತ್‌ಗಳಿಂದ ಸರಿಯಾದ ವೇಳೆಗೆ ಬಿಡುಗಡೆ ಮಾಡದೇ ಕಾರ್ಯಕ್ರಮಕ್ಕೆ ತೊಂದರೆ ಉಂಟಾಗುತ್ತಿದೆ ಉದಾ: ಕಳೆದ ತಿಂಗಳು ತುಮಕೂರು ಜಿಲ್ಲಾ ಪಂಚಾಯತ್‌ನಿಂದ ಹಣ ಬಿಡುಗಡೆಯಾಗದೇ ಆಹಾರಧಾನ್ಯಗಳು ಸರಬರಾಜಾಗಿಲ್ಲ. ಈ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಜಂಟಿ ನಿರ್ದೇಶಕರು (ಮ.ಉ.ಯೋ.) ಕೋರಿದರು.

ಸಭಾಧ್ಯಕ್ಷರು, ಕೆ.ಎಫ್.ಸಿ.ಎಸ್.ಸಿ. ನೀಡುತ್ತಿರುವ ಮುಂಗಡವನ್ನು ಎರಡು ತಿಂಗಳಿಗೆ ಬೇಕಾಗುವ ಬೇಡಿಕೆಗೆ ಎದುರಾಗಿ ಒಮ್ಮೆ ಅನುದಾನ ಬಿಡುಗಡೆ ಮಾಡಿ ಧಾನ್ಯ/ಸಾಮಾಗ್ರಿಗಳನ್ನು ಪ್ರತಿ ತಿಂಗಳು ಸರಬರಾಜು ಪಡೆಯಲು ಸೂಚಿಸಿದರು. ಯಾವುದೇ ಕಾರಣಕ್ಕೂ ವಿಳಂಬಮಾಡದೆ, ನಿಗಮಕ್ಕೆ ಸಲ್ಲಬೇಕಾದ ಹಣವನ್ನು ತಕ್ಷಣ ಬಿಡುಗಡೆ ಮಾಡುವುದು ಜಿಲ್ಲಾ ಪಂಚಾಯತ್‌ನ ಕರ್ತವ್ಯವಾಗಿರುತ್ತದೆ. ಒಂದು ವೇಳೆ ಇದರಿಂದಾಗಿ ಕಾರ್ಯಕ್ರಮಕ್ಕೆ ತೊಡಕುಂಟಾದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ಆದೇಶಿಸಿದರು.

**ಕಾರ್ಯಾದೇಶದ ನಂತರ ಬಿಲ್ಲು ತಯಾರಿಸಿ, ಖಜಾನೆಯಿಂದ ಚೆಕ್ ಪಡೆಯಲು ಕನಿಷ್ಠ 10 ರಿಂದ 15 ದಿನಗಳಾಗುವುದಾಗಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೆಂಗಳೂರು, ಇವರು ಸಭೆಯ ಗಮನಕ್ಕೆ ತಂದರು. ಸಭಾಧ್ಯಕ್ಷರು, ಜಿಲ್ಲಾ ಪಂಚಾಯತ್‌ನಿಂದ ಕಾರ್ಯಾದೇಶ ನೀಡಿದಲ್ಲಿ ಖರೀದಿ ಪ್ರಕ್ರಿಯೆ ಪ್ರಾರಂಭಿಸಲು ಕೆ.ಎಫ್.ಸಿ.ಎಸ್.ಸಿ.ಯವರಿಗೆ ಸೂಚಿಸಿದರು.**

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿ.ಪಂ.)**

**11. ಅಕ್ಷರ ದಾಸೋಹ ಕಾರ್ಯಕ್ರಮದಡಿ ಸರಬರಾಜಾಗುತ್ತಿರುವ ಅನಿಲ ಸಿಲಿಂಡರ್‌ಗಳನ್ನು ಸಹಾಯಾನುಧಾನಕ್ಕೆ ಒಳಪಡಿಸುವ ಬಗ್ಗೆ :**

ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಶಾಲೆಗಳಿಗೆ ಸರಬರಾಜಾಗುವ 9 ಅಡುಗೆ ಅನಿಲ ಸಿಲಿಂಡರ್‌ಗಳನ್ನು ಸಹಾಯಾನುದಾನದ ದರದಲ್ಲಿ ಮತ್ತು ಉಳಿದ ಸಿಲಿಂಡರ್‌ಗಳನ್ನು ಸಹಾಯಾನುದಾನ ಹೊರತುಪಡಿಸಿದ ದರದಲ್ಲಿ ಸರಬರಾಜಾಗುತ್ತಿದೆ. ಸಹಾಯಾನುದಾನ ರಹಿತ ದರಕ್ಕೆ ಹೆಚ್ಚುವರಿ ದರವನ್ನು ಕೇಂದ್ರ ಸರ್ಕಾರವು ಶೇಕಡಾ 75 ರಷ್ಟು ತನ್ನ ಪಾಲನ್ನು ಬಿಡುಗಡೆಗೊಳಿಸುತ್ತಿದೆ. ಶೇಕಡಾ 25 ರಷ್ಟನ್ನು ರಾಜ್ಯ ಸರ್ಕಾರವು ಭರಸಬೇಕಾಗಿದ್ದು ಭರಿಸಲು ಅನುಮತಿಸ ಬೇಕಾಗಿದೆ ಅಥವಾ ಎಲ್ಲಾ ಸಿಲಿಂಡರ್‌ಗಳನ್ನು ಸಬ್ಸಿಡಿ ದರದಲ್ಲಿ ವಿತರಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬಹುದಾಗಿದೆ ಎಂದು ಜಂಟಿ ನಿರ್ದೇಶಕರು (ಮ.ಉ.ಯೋ) ರವರು ಸಭೆಯ ಗಮನಕ್ಕೆ ತಂದರು.

**ಅನಿಲ ಸರಬರಾಜು ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದಾಗಿದ್ದು, ಕೇಂದ್ರ ಸರ್ಕಾರದ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿದೆಯೆಂದು ಅಭಿಪ್ರಾಯಪಡಲಾಯಿತು.**

**12. ಮಧ್ಯಾಹ್ನ ಉಪಹಾರ ಯೋಜನೆಯನ್ನು ಸಾಮಾಜಿಕ ಲೆಕ್ಕಪರಿಶೋಧನೆಗೆ ಒಳಪಡಿಸುವ ಬಗ್ಗೆ.**

ಕೇಂದ್ರ ಸರ್ಕಾರವು ಮಧ್ಯಾಹ್ನ ಉಪಹಾರ ಯೋಜನೆಯನ್ನು ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಡಿಸುವ ಕುರಿತು ನಿರ್ದೇಶನ ನೀಡಿದ್ದು, ಈ ಬಗ್ಗೆ ಪ್ರಾಯೋಗಿಕವಾಗಿ ಎರಡು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲು ಸೂಚಿಸಿರುತ್ತಾರೆ. ಕೇಂದ್ರ ಸರ್ಕಾರವು ಬಳ್ಳಾರಿ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿದ್ದು ರಾಜ್ಯದ ವತಿಯಿಂದ ಬಿಜಾಪುರ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲು ಸಭೆಯ ಅನುಮತಿಯನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಕೋರಿದರು. ಪ್ರಾಯೋಗಿಕವಾಗಿ **ಎರಡು ಜಿಲ್ಲೆಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಡಿಸಲು ಕೇಂದ್ರ ಸರ್ಕಾರ ಸೂಚಿಸಿರುವುದರಿಂದ ಕೇಂದ್ರ ಸರ್ಕಾರದ ನಿರ್ದೇಶನ ಪಾಲಿಸಲು ಒಪ್ಪಿಗೆ ಸೂಚಿಸಿದರು.**

ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸ್ಥಳೀಯವಾಗಿಯೂ ಲೆಕ್ಕ ಪರಿಶೋಧನೆ ಮಾಡುವವರಿಂದಲೂ ಪರಿಶೀಲನೆಗೆ ಒಳಪಟ್ಟಲ್ಲಿ ಒಳ್ಳೆಯದು. ಸ್ಥಳೀಯರ ಅಭಿಪ್ರಾಯ ನಿಖರವಾಗಿರುತ್ತದೆ. **ಆದ್ದರಿಂದ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳಿಂದ (SHG) ಅಭಿಪ್ರಾಯವನ್ನು ಸಂಗ್ರಹಿಸಲು ತೀರ್ಮಾನಿಸಲಾಯಿತು.**

13. ಬಿಹಾರದ ಘಟನೆಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ತೆಗೆದುಕೊಂಡಿರುವ ಸುರಕ್ಷತೆ ಕ್ರಮಗಳ ಬಗ್ಗೆ ಸಭಾಧ್ಯಕ್ಷರು ಮಾಹಿತಿಗಳನ್ನು ಪಡೆದು ಯೋಜನೆಯ ಅನುಷ್ಠಾನವನ್ನು ಸುರಕ್ಷತೆ, ಜಾಗರೂಕತೆ ಮತ್ತು ಮಿತವ್ಯಯದಿಂದ ಅನುಷ್ಠಾನಗೊಳಿಸಿ ಮಕ್ಕಳಿಗೆ ಶುಚಿ-ರುಚಿಯಾದ, ಪೌಷ್ಠಿಕಾಂಶಭರಿತ, ಸ್ಥಳೀಯ ಆಹಾರ ಪದ್ಧತಿಯನ್ವಯ ಆಹಾರ ಧಾನ್ಯ, ತರಕಾರಿಗಳನ್ನು ಬಳಸಿಕೊಂಡು ಆಹಾರ ಸಿದ್ದಪಡಿಸಿ ಮಕ್ಕಳಿಗೆ ವಿತರಿಸಲು ಕ್ರಮವಹಿಸುವಂತೆ ಸಭಾಧ್ಯಕ್ಷರು ಸೂಚಿಸಿದರು.

ವಂದನೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಕೌಶಿಕ್ ಮುಖರ್ಜಿ)**
**ಅಪರ ಮುಖ್ಯ ಕಾರ್ಯದರ್ಶಿ**

**ಗೆ,**

1. ಶ್ರೀ ನಳೀನ್ ಕುಮಾರ್ ಕಟಿಲ್, ಲೋಕ ಸಭಾ ಸದಸ್ಯರು, ದಕ್ಷಿಣ ಕನ್ನಡ ಕ್ಷೇತ್ರ,
2. ಶ್ರೀ ಎಸ್.ಆರ್. ವಿಶ್ವನಾಥ್, ಶಾಸಕರು, ಯಲಹಂಕ ಕ್ಷೇತ್ರ, ಬೆಂಗಳೂರು.

3. ಶ್ರೀ ಗಯಾ ಪ್ರಸಾದ್, ನಿರ್ದೇಶಕರು[ಎಂ.ಡಿ.ಎಂ.] ಎಂ.ಹೆಚ್.ಆರ್.ಡಿ. ನವದೆಹಲಿ,
4. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
8. ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು.
11. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು.
12. ಹಿರಿಯ ಪ್ರಾದೇಶಿಕ ವ್ಯವಸ್ಥಾಪಕರು, ಭಾರತೀಯ ಆಹಾರ ನಿಗಮ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ, ಬೆಂಗಳೂರು.
14. ನಿರ್ದೇಶಕರು, ಕೇಂದ್ರ ಆಹಾರ ಸಂಶೋಧನಾ ಕೇಂದ್ರ, ಮೈಸೂರು.
15. ಸಹಾಯಕ ತಾಂತ್ರಿಕ ಸಲಹೆಗಾರರು, ಫುಡ್ ಅಂಡ್ ನ್ಯೂಟ್ರಿಷಯನ್ ಬೋರ್ಡ್, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.
16. ಶ್ರೀ ಮಧು ಪಂಡಿತ್ ದಾಸ್, ಇಸ್ಕಾನ್, ರಾಜಾಜಿನಗರ, ಬೆಂಗಳೂರು.
17. ಡಾ|| ವೇದಾ ಜಕಾರಿಯಾ, ಸಂಜೀವಿನಿ ಟ್ರಸ್ಟ್, ರಿಚ್‌ಮಂಡ್ ಟೌನ್, ಬೆಂಗಳೂರು.
18. ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಪ್ರೆಸಿಡೆಂಟ್ ಮತ್ತು ಮ್ಯಾನೇಜಿಂಗ್ ಟ್ರಸ್ಟಿ, ಅದಮ್ಯ ಚೇತನ, ಶ್ರೀಮತಿ ಗಿರಿಜಾಶಾಸ್ತ್ರಿ ಸಮರ್ಥನ ಸಂಸ್ಥೆ, ಗವಿಪುರಂ ಗುಟ್ಟಹಳ್ಳಿ, ಲಕ್ಷ್ಮಿಪುರ, ಹನುಮಂತನಗರ, ಬೆಂಗಳೂರು.
19. ಶ್ರೀ ಅಪ್ಪಾಜಿಗೌಡ, ಅಧ್ಯಕ್ಷರು, ಕನ್ನಡ ಕಸ್ತೂರಿ ಕಲಾ ಸಂಘ, ಬೆಂಗಳೂರು.
20. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಯಚೂರು, ಬಾಗಲಕೋಟೆ ಮತ್ತು ಚಾಮರಾಜನಗರ.
21. ಡಾ|| ಸಿ.ಜಿ. ವೆಂಕಟೇಶ್ ಮೂರ್ತಿ, ಪ್ರೊಫೇಸರ್, ಆರ್.ಐ.ಇ., ಮೈಸೂರು.
22. ಶ್ರೀ ಬಸವರಾಜು ಗುರಿಕಾರ್, ಅಧ್ಯಕ್ಷರು, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು.
23. ನಿರ್ದೇಶಕರು ಪ್ರೊಫೇಸರ್ ಅಂಡ್ ಹೆಡ್, ಐಸಕ್, ಬೆಂಗಳೂರು.

**ಪ್ರತಿಯನ್ನು:**
ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು ರವರಿಗೆ ಸಲ್ಲಿಸಿದೆ.